## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 338/2022**

| | | |
|---|---|---|
| ಸಾಕ್ಷಿದಾರರ ಹೆಸರು | : ತನ್ವೀರ್ ಪಾಷಾ | ಪಿಡಬ್ಲ್ಯೂ ಃ 4 |
| ತಂದೆಯ / ಗಂಡನ ಹೆಸರು | : ಆರೀಫ್ ಪಾಷಾ | ಸಿಡಬ್ಲ್ಯೂ ಃ 5 |
| ವಯಸ್ಸು | : 28 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸಸ್ಥಳ | : ಜೆ ಸಿ ನಗರ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 13.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಚಾಸಾ.1 ನನ್ನ ಅಕ್ಕ. ಚಾಸಾ.2 ನನ್ನ ಭಾವ. ಚಾಸಾ.1 ಮತ್ತು 2 ರವರು ನಮ್ಮ ಮನೆಯ ಪಕ್ಕದಲ್ಲಿ ವಾಸವಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ ಗೊತ್ತು. ಆತನು ನಮ್ಮ ಮನೆಯ ಎದುರುಗಡೆ ವಾಸವಿರುತ್ತಾರೆ. ಆರೋಪಿಯೂ ಕೂಡ ಆಟೋ ಚಾಲಕನಾಗಿರುತ್ತಾನೆ.

3. ಈಗ 2 ವರ್ಷಗಳ ಹಿಂದೆ ಆರೋಪಿಯು ಮಧ್ಯಪಾನ ಮಾಡಿ ಬಂದು ನಮ್ಮ ಅಕ್ಕನ ಮಗಳಿಗೆ, ನಮ್ಮ ಅಕ್ಕನಿಗೆ, ಬೈಯುತ್ತಿದ್ದನು. ನನಗೆ ತಾರೀಖು ಹೇಳಲು ಆಗುವುದಿಲ್ಲ. ಆ ದಿನ ನಾವು ಆರೋಪಿ ಬೈಯುತ್ತಿರುವುದನ್ನು ಕೇಳಲು ಸಂಜೆ 07.00

ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪ ನೂರ್ ಹುಸೇನ್ ಚಾಸಾ.6 ರವರು ಹೋದಾಗ ಆರೋಪಿ ನನಗೆ ಮೊದಲಿಗೆ ಕೈ ನಿಂದ ಹೊಡೆದಿರುತ್ತಾರೆ. ಆಗ ನನ್ನ ಭಾವ ಚಾಸಾ.2 ರವರು ಅಲ್ಲಿಗೆ ಬಂದು ಯಾಕೆ ಬೈಯುತ್ತೀಯಾ ಎಂದು ಕೇಳಿದಾಗ , ಆರೋಪಿ ರಿಪೀಸ್ ಪಟ್ಟಿಯಿಂದ ನಮ್ಮ ಭಾವನಿಗೆ ತಲೆಗೆ ಹೊಡೆದಿರುತ್ತಾನೆ. ನನ್ನ ಭಾವನಿಗೆ ತಲೆಗೆ ಏಟಾಗಿ, ರಕ್ತ ಬರಲು ಪ್ರಾರಂಭಿಸಿತು. ಗಲಾಟೆ ನಡೆಯುತ್ತಿದ್ದಾಗ ರಮೇಶನ ಮನೆಯವರು ಬಂದು ಆತನನ್ನು ಮನೆಯ ಒಳಗಡೆ ಕರೆದುಕೊಂಡು ಹೋದರು. ನಂತರ ನನ್ನ ಭಾವವನ್ನು ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಿಕಿತ್ಸೆ ಆಗದಿದ್ದ ಕಾರಣ ನಂತರ ಅವರನ್ನು ಕೆ ಆ‌ರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ಅಲ್ಲಿ ಒಂದು ವಾರ ನಮ್ಮ ಭಾವ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನಂತರ ನನ್ನ ಅಕ್ಕ ದೂರನ್ನು ಸಲ್ಲಿಸಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ನನ್ನ ಭಾವನಿಗೆ ಹಲ್ಲೆ ಮಾಡಲು ಉಪಯೋಗಿಸಿದ ರಿಪೀಸ್ ಪಟ್ಟಿಯನ್ನು ನೋಡಿದರೆ ಗುರುತಿಸಬಲ್ಲೆ. ಆ ಸಮಯದಲ್ಲಿ ಲೈಟ್ ಕಂಬದ ದೀಪದ ಬೆಳಕು ಇತ್ತು. ಹಾಗಾಗಿ ಗಲಾಟೆಯನ್ನು ನೋಡಿರುತ್ತೇನೆ. ಸಾಕ್ಷಿಯೂ ಎಂಒ–1 ಅನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

**(ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಾಯಾವಕಾಶ ಕೋರಿದ್ದು, ಸಮಯ ನೀಡಿ, ಪಾಟೀ ಸವಾಲನ್ನು ಮುಂದೂಡಲಾಯಿತು. )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**